ಕರ್ನಾಟಕ ಸರ್ಕಾರ

T.No 35082/24-25 ವಾಣಿಜ್ಯ ತೆರಿಗೆ ಇಲಾಖೆ

ಸಂಖ್ಯೆ:ವಾತೆಜಂಆ(ಆ)/ವಿ.ಸ.ಸೇ.ತೆ.ಕ-6/ಖಾ.ವಾ.ಟಿ/ಸಿಆರ್-07/2024-25.

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರವರ ಕಛೇರಿ (ಆಡಳಿತ)
ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ-6,
ಕೆಐಎಡಿಬಿ ಕಟ್ಟಡ, ಬಿ-ಬ್ಲಾಕ್, 3ನೇ ಮಹಡಿ,
4ನೇ ಫೇಸ್, ಪೀಣ್ಯ 2ನೇ ಹಂತ, ಬೆಂಗಳೂರು,
ದಿನಾಂಕ:27-02-2024.

Office of the Additional Commissioner of Commercial Taxes
1419
28 FEB 2025
ADCOM Bengaluru (e-Governance)

## ಟೆಂಡರ್ ಅಧಿಸೂಚನೆ

ವಿಷಯ:- ದಿನಾಂಕ:01-04-2025 ರಿಂದ 31-03-2026ರ ವರೆಗಿನ ಒಂದು ವರ್ಷದ ಅವಧಿಗೆ ಈ ವಿಭಾಗಕ್ಕೆ ಅಗತ್ಯವಿರುವ 12 ಸಂಖ್ಯೆಯ ಚಾಲಕರೇ ಮಾಲೀಕರಾಗಿರುವ ಖಾಸಗಿ ವಾಹನಗಳನ್ನು ಸಾಮಾನ್ಯ ಟೆಂಡರ್ ಪ್ರಕ್ರಿಯೆ ಮುಖೇನ ಮಾಸಿಕ ಬಾಡಿಗೆಗೆ ಹೊರಗುತ್ತಿಗೆಯ ಆಧಾರದಲ್ಲಿ ಪಡೆದುಕೊಳ್ಳುವ ಬಗ್ಗೆ.

ಉಲ್ಲೇಖ:-
1. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ ರವರ ಪತ್ರ ಸಂ: ಆ ಇ 59/ವಾ.ತೆ.ಇ-2016 ದಿನಾಂಕ:30-03-2016.
2. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ ರವರ ಪತ್ರ ಸಂ: ಆ ಇ 59/ವಾ.ತೆ.ಇ-2017 ದಿನಾಂಕ:08-05-2017.
3. ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ ಆಇ 156 ವೆಚ್ಚ-12/2019, ದಿನಾಂಕ:22-03-2022.
4. ಸರ್ಕಾರದ ಆದೇಶ ಸಂ: ಸಿಆಸುಇ 30 ಶಿವಾನೀ 2019, ಬೆಂಗಳೂರು ದಿನಾಂಕ:31-03-2022.
5. ಮಾನ್ಯ ವಾಣಿಜ್ಯ ತೆರಿಗೆಗಳ ಆಯುಕ್ತರವರ ಸುತ್ತೋಲೆ ಸಂ: ವಿಹೆಚ್‌ಟಿ ಸಿ.ಆರ್.22/19-20 ದಿನಾಂಕ: 27-04-2022.
6. ವಾಣಿಜ್ಯ ತೆರಿಗೆ ಆಯುಕ್ತರವರ ಆದೇಶ ಸಂಖ್ಯೆ: ವಿಹೆಚ್‌ಟಿ/ಸಿ.ಆರ್-11/24-25 ದಿನಾಂಕ:15-02-2025

ACCT 24-3.

*******

1. ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು(ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ-6, ಬೆಂಗಳೂರು ಈ ಕಛೇರಿಯ ಮತ್ತು ಅಧೀನ ಕಛೇರಿಗಳ ಉಪಯೋಗಕ್ಕಾಗಿ ಮಾಲೀಕರೇ ಚಾಲಕರಾಗಿರುವ **12(ಹನ್ನೆರಡು)** ಸಂಖ್ಯೆಯ ಖಾಸಗಿ ವಾಹನಗಳನ್ನು ಮಾಸಿಕ ಬಾಡಿಗೆ ಆಧಾರದ ಮೇಲೆ ಪಡೆಯಲು ಉಲ್ಲೇಖ(6)ರಲ್ಲಿ ತಿಳಿಸಿರುವ ಮಾನ್ಯ ಆಯುಕ್ತರವರ ಪತ್ರದಲ್ಲಿ ಅನುಮತಿಸಿರುವುದರಿಂದ, ಮಾಲೀಕರೇ ಚಾಲಕರಾಗಿರುವವರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಒಬ್ಬ ವಾಹನ ಮಾಲೀಕ/ ಚಾಲಕರು 01 ವಾಹನ ಸೇವೆಗೆ ಮಾತ್ರ ಅರ್ಜಿಯನ್ನು ಸಲ್ಲಿಸುವುದು. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 96, ಶಿವಾನಿ 2012, ದಿನಾಂಕ: 23-08-2012. ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ: ಆಇ 156 ವೆಚ್ಚ-12-2019 ದಿನಾಂಕ:22-03-2022, ಪ್ರಸ್ತುತ ಹಿಂಬರಹದಲ್ಲಿ ಆರ್ಥಿಕ ಇಲಾಖೆಯು ದರ ಪರಿಷ್ಕರಿಸಲು ಸಹಮತಿಸಿ ಆದೇಶಿಸಿದ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 30 ಶಿವಾನೀ 2019, ಬೆಂಗಳೂರು ದಿನಾಂಕ:31-03-2022 ರಲ್ಲಿ ತಿಳಿಸಿರುವ ನಿಯಮಗಳನ್ವಯ, ಅದರಂತೆ ವಾಣಿಜ್ಯ ತೆರಿಗೆಗಳ ಆಯುಕ್ತರ ಸುತ್ತೋಲೆ ಸಂ: ವಿಹೆಚ್‌ಟಿ ಸಿ.ಆರ್.22/19-20 ದಿನಾಂಕ: 27-04-2022. ರನ್ವಯ ಹಾಗೂ ವಾಣಿಜ್ಯ ತೆರಿಗೆ ಆಯುಕ್ತರವರ ಅನುಮತಿ ಪತ್ರ ಸಂಖ್ಯೆ: ವಿಹೆಚ್‌ಟಿ/ಸಿ.ಆರ್-11/24-25 ದಿನಾಂಕ:15-02-2025 ರಂತೆ ಮಾಸಿಕ **ರೂ. 35,000/-**ಗಳಿಗೆ ಖಾಸಗಿ ವಾಹನಗಳ ಸೇವೆಯನ್ನು ಪಡೆಯಲಾಗುವುದು.

1. ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ: ಆಇ 156 ವೆಚ್ಚ-12-2019 ದಿನಾಂಕ:22-03-2022 ರಲ್ಲಿ ದರಪರಿಷ್ಕರಿಸಲು ಸಹಮತಿಸಿ ಆದೇಶಿಸಿದ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 30 ಶಿವಾನೀ 2019, ಬೆಂಗಳೂರು ದಿನಾಂಕ:31-03-2022ರ ಅನ್ವಯ ವಾಹನಗಳ ಬಾಡಿಗೆ ಮೊತ್ತವನ್ನು(**ರೂ.35,000/-**) ನೀಡಲಾಗುವುದು.

1. ವಾಹನದ ಮಾದರಿಯು 2018 ತಯಾರಿಕ ವರ್ಷ ಮತ್ತು ನಂತರದಾಗಿರತಕ್ಕದ್ದು, ಪ್ರತಿ ವಾಹನದ ಗುಣಮಟ್ಟವನ್ನು ಹಾಗೂ ಚಾಲನ ಕೌಶಲ್ಯವನ್ನು ಪರಿಶೀಲಿಸಿದ ನಂತರವೇ ವಾಹನಗಳನ್ನು ತೆಗೆದುಕೊಳ್ಳಲಾಗುವುದು.
2. ಗುತ್ತಿಗೆಯ ಅವಧಿ ದಿನಾಂಕ:01-04-2025 ರಿಂದ 31-03-2026 ರವರೆಗೆ.
3. ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ:17-03-2025 ಸಂಜೆ 5:00 ಘಂಟೆಯವರೆಗೆ. ಆ ನಂತರ ಸಲ್ಲಿಸಿದ ಅರ್ಜಿಗಳನ್ನು ಪುರಸ್ಕರಿಸಲಾಗುವುದಿಲ್ಲ.
4. ಪಡೆಯಲಾಗುವ ವಾಹನಗಳ ಸಂಖ್ಯೆ: ಒಟ್ಟು-12 (ಹನ್ನೆರಡು ಮಾತ್ರ)

ಅರ್ಹಗೊಂಡ ಮಾಲೀಕರೇ ಚಾಲಕರಾಗಿರುವ ವಾಹನ ಮಾಲೀಕ/ಚಾಲಕರ ವಿವರವನ್ನು ಇಲಾಖೆಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗುವುದು ಹಾಗೂ ತಿಳಿಸಲಾಗುವುದು.

**<u>ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲಾತಿಗಳು/ವಿವರಗಳು:</u>**

1 ಅರ್ಜಿದಾರರ ಹೆಸರು,ವಿಳಾಸ ಹಾಗೂ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳು-2
2 ವಿಳಾಸದ ದಾಖಲೆ (ಮತದಾರರ ಗುರುತಿನ ಚೀಟಿ/ರೇಷನ್ ಕಾರ್ಡ್/ಆಧಾರ್ ಕಾರ್ಡ್/ಪಾಸ್ ಪೋರ್ಟ್ ಅಥವಾ ಇತರೆ ಭಾವಚಿತ್ರ ಹೊಂದಿರುವ ಗುರುತಿನ ಚೀಟಿ ಹಾಗೂ ಖಾಯಂ ವಿಳಾಸದ ದಾಖಲೆ, ಬ್ಯಾಂಕ್ ಖಾತೆಯ ವಿವರಗಳು/ಚೆಕ್ಕಿನ ಪ್ರತಿ.
3 ವಾಹನದ ನೊಂದಣಿ ಪುಸ್ತಕದ ಪ್ರತಿ – ಪ್ರಮಾಣ ಪತ್ರ
4 ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ನೀಡಿರುವ ವಾಹನದ ವಿಮಾ ಪಾಲಿಸಿಯ ಪ್ರತಿ
5 ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ನೀಡಿರುವ ವಾಹನ ಚಾಲನಾ ಪರವಾನಗಿ ಪ್ರತಿ
6 ರಸ್ತೆ ತೆರಿಗೆ ಪಾವತಿಸಿರುವ ವಿವರ
7 ಮಾಲೀಕರಿಗೆ ಸಂಬಂಧಿಸಿದಂತೆ ಡ್ರೈವಿಂಗ್ ಲೈಸನ್ಸ್
ಚಾಲಕರ ದೈಹಿಕ ಸಾಮರ್ಥ್ಯ ಪ್ರಮಾಣ ಪತ್ರ
8 ಪಾನ್ ಕಾರ್ಡ್ ಮತ್ತು ಆಧಾರ್ ಕಾರ್ಡ್ ಪ್ರತಿಗಳನ್ನು ಲಗತ್ತಿಸತಕ್ಕದು.
9 ವಾಯುಮಾಲಿನ್ಯ ರಹಿತ ಪ್ರಮಾಣ ಪತ್ರ(Emission certificate)

**ಸೂಚನೆಗಳು:-**

1 ಮೇಲ್ಕಂಡ ವಿವರಗಳು ಹಾಗೂ ಎಲ್ಲಾ ದಾಖಲಾತಿಗಳ ಪ್ರತಿಗಳನ್ನು ಸೀಲು ಮಾಡಿದ ಲಕೋಟೆಯಲ್ಲಿಟ್ಟು, ಲಕೋಟೆಯ ಮೇಲೆ ದಪ್ಪ ಅಕ್ಷರದಲ್ಲಿ ಖಾಸಗಿ ವಾಹನ ಚಾಲಕರ/ಮಾಲೀಕರ ಹೊರಗುತ್ತಿಗೆ ಸೇವೆ ಸಲ್ಲಿಸಲು ಅರ್ಜಿ ಎಂದು ನಮೂದಿಸುವುದು.
2 ಅಪೂರ್ಣ ವಿವರಗಳು ಹಾಗೂ ಮೇಲ್ಕಂಡ ದಾಖಲಾತಿಗಳನ್ನು ಸಲ್ಲಿಸದೇ ಇದ್ದ ಪಕ್ಷದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು
3 ಅರ್ಜಿಗಳನ್ನು ಖುದ್ದಾಗಿ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ-6, ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ-6, ಕೆಐಎಡಿಬಿ ಕಟ್ಟಡ, ಬಿ-ಬ್ಲಾಕ್, 3ನೇ ಮಹಡಿ, 4ನೇ ಫೇಸ್, ಪೀಣ್ಯಾ 2ನೇ ಹಂತ, ಬೆಂಗಳೂರು ಇವರ ಶಾಖೆಯಲ್ಲಿ ಸಲ್ಲಿಸುವುದು.
4 ಅರ್ಜಿಗಳನ್ನು ಸಲ್ಲಿಸಿರುವುದಕ್ಕೆ ಸ್ವೀಕೃತಿ ಪಡೆಯುವುದು ಹಾಗೂ ಕಾರ್ಯ ನಿರ್ವಹಣೆಯಲ್ಲಿ ಪಾಲಿಸಬೇಕಾದ ನಿಯಮಗಳು/ಷರತ್ತುಗಳ ವಿವರಗಳ ಪಟ್ಟಿ ಅನ್ವಯ ಖಡ್ಡಾಯವಾಗಿ ನಿಯಮಗಳನ್ನು ಅರ್ಹಗೊಳ್ಳುವ ವಾಹನ ಮಾಲೀಕ/ಚಾಲಕರು ಖಡ್ಡಾಯವಾಗಿ ಪಾಲಿಸತಕ್ಕದ್ದು.
5 ಯಾವುದೇ ಕಾರಣವನ್ನು ನೀಡದೆ ಅರ್ಜಿಯನ್ನು ತಿರಸ್ಕರಿಸುವ ಹಕ್ಕನ್ನು ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ-06, ಬೆಂಗಳೂರು ಇವರಿಗೆ ಕಾಯ್ದಿರಿಸಲಾಗಿದೆ.
6 ಆಯ್ಕೆಯಾದ ಅರ್ಜಿದಾರರ ಪಟ್ಟಿಯನ್ನು ಸೂಚನಾ ಫಲಕದಲ್ಲಿ ಪ್ರಕಟಿಸಲಾಗುವುದು.

**<u>ಟೆಂಡರ್‌ನಲ್ಲಿ ಸೂಚಿಸಿರುವ ಷರತ್ತು ಮತ್ತು ನಿಬಂಧನೆಗಳು:-</u>**

01 ಅನಾರೋಗ್ಯವೂ ಸೇರಿದಂತೆ ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ಒಂದು ತಿಂಗಳಲ್ಲಿ ಒಂದು ದಿನ ಮಾತ್ರ ವಾಹನ ಉಪಯೋಗಿಸುವ ಕಛೇರಿಯ ಅಧಿಕಾರಿಯವರಿಂದ ಅನುಮತಿ ಪಡೆದು, ಮಾಲೀಕ-ಚಾಲಕರು ರಜೆ

ಪಡೆಯಬಹುದು. ಆ ಅವಧಿಯಲ್ಲಿ ಬದಲಿ ವಾಹನದ ವ್ಯವಸ್ಥೆ ಕಡ್ಡಾಯವಾಗಿ ಮಾಡಲೇಬೇಕು. ಇಲ್ಲದಿದ್ದರೆ ಗೈರುಹಾಜರಿ ದಿವಸದ ಬಾಡಿಗೆ ಕಡಿತಗೊಳಿಸಲಾಗುವುದು.

02 ಮಾಸಿಕ ಬಾಡಿಗೆ ಆಧಾರದ ಮೇಲೆ ಹಾಗೂ ಕರಾರಿನಂತೆ ದರಗಳಿಗೆ ಒಳಪಟ್ಟು ಮಾತ್ರ ವಾಹನಗಳನ್ನು ಬಾಡಿಗೆಗೆ ಪಡೆಯಲಾಗುತ್ತದೆ.

03 ಮಾಲೀಕ-ಚಾಲಕರು ಕಟ್ಟುನಿಟ್ಟಾಗಿ ಸಮಯಪಾಲನೆ ಮಾಡತಕ್ಕದ್ದು. ಕರ್ತವ್ಯದ ಸಮಯದಲ್ಲಿ ಕಡ್ಡಾಯವಾಗಿ ಸಮವಸ್ತ್ರವನ್ನು ಧರಿಸಬೇಕು. ವಾಹನ ಉಪಯೋಗಿಸುವ ಕಛೇರಿಯ ಮುಖ್ಯಸ್ಥರಿಂದ ಈ ಕುರಿತು ದೂರುಗಳು ಬಂದಲ್ಲಿ ಅಂತಹ ವಾಹನದ ಬಳಕೆಯನ್ನು ನಿಲ್ಲಿಸುವ, ಒಪ್ಪಂದವನ್ನು ರದ್ದುಪಡಿಸುವ ಅಧಿಕಾರ ವಾಣಿಜ್ಯ ತೆರಿಗೆ ಜಂಟಿ ಆಯುಕ್ತರವರದ್ದಾಗಿರುತ್ತದೆ.

04 ಇಲಾಖೆಯ ಈ ವಿಭಾಗದ ಪ್ರತಿ ಕಛೇರಿಯಲ್ಲಿ ಉಪಯೋಗಿಸುವ ಪ್ರತಿ ವಾಹನಕ್ಕೆ ಸಂಬಂಧಿಸಿದಂತೆ ನಿಗಧಿತ ಲಾಗ್ ಪುಸ್ತಕವನ್ನು ನಿರ್ವಹಿಸಿ ಪ್ರತಿ ದಿನದ ಆರಂಭ ಮತ್ತು ಅಂತ್ಯದವರೆಗಿನ ವಾಹನ ಓಡಾಟದ ಸಂಬಂಧ ಈ ಪುಸ್ತಕದಲ್ಲಿ ಅಗತ್ಯ ದಾಖಲೆಗಳನ್ನು ನಮೂದಿಸಿ ವಾಹನವನ್ನು ಉಪಯೋಗಿಸಿದ ಅಧಿಕಾರಿಯವರಿಂದ ರುಜು ಪಡೆಯತಕ್ಕದ್ದು.

05 ಈ ವಿಭಾಗದ ಪ್ರತಿ ಕಛೇರಿಯಲ್ಲಿ ಉಪಯೋಗಿಸುವ ವಾಹನ ಓಡಾಟಕ್ಕೆ ಸಂಬಂಧಿಸಿದಂತೆ ಆಯಾ ದಿನದ ಆರಂಭಿಕ ಮತ್ತು ಅಂತಿಮ ಸಮಯದ ಗಣನೆ ಮತ್ತು ಕಿಲೋಮೀಟರ್‌ನ ಗಣನೆಯು ಆಯಾ ಕಛೇರಿಯ ಆವರಣದಿಂದ ಕಛೇರಿ ಕಾರ್ಯದ ನಿಮಿತ್ತ ಆ ವಾಹನ ಹೊರಡುವ ಕ್ಷಣದಿಂದ ಪ್ರಾರಂಭವಾಗುತ್ತದೆ ಹಾಗೂ ಆ ದಿನದ ಕಾರ್ಯ ಮುಗಿದ ಮೇಲೆ ಅದೇ ಸ್ಥಳದಲ್ಲಿ ಕೊನೆಗೊಳ್ಳುತ್ತದೆ.

06 ಯಾವುದೇ ತಿಂಗಳಿನ ವಾಹನ ಬಾಡಿಗೆ ಹಣವನ್ನು ಅದರ ಮುಂದಿನ ತಿಂಗಳು ವಾಹನ ಮಾಲೀಕರು ಸಲ್ಲಿಸುವ ಬಿಲ್ಲಿನ ಆದಾರದ ಮೇಲೆ ಪಾವತಿಸಲಾಗುವುದು. ಇಲಾಖೆಗೆ ಬಾಡಿಗೆ ಹಣದ ಬಿಲ್ಲನ್ನು ಸಂಬಂಧಿಸಿದ ವಾಹನದ ಲಾಗ್ ಪುಸ್ತಕದ ಕಛೇರಿ ಮುಖ್ಯಸ್ಥರಿಂದ ದೃಢೀಕೃತವಾದ ನಕಲು ಪ್ರತಿ ಮತ್ತು ವಾಹನ ಉಪಯೋಗಿಸಿದ ಕಛೇರಿಯ ಮುಖ್ಯಸ್ಥರ ಸೂಕ್ತ ಪ್ರಮಾಣಪತ್ರದ ಜೊತೆ ಪ್ರತಿ ತಿಂಗಳ 5ನೇ ತಾರೀಖಿನೊಳಗೆ ಸಲ್ಲಿಸತಕ್ಕದ್ದು.

07 ವಾಹನಗಳನ್ನು ಬಾಡಿಗೆ ಆಧಾರದ ಮೇಲೆ ಈ ಇಲಾಖೆಗೆ ಒದಗಿಸುವ ಕಾಲಮಿತಿಯು ಆರಂಭದಲ್ಲಿ ದಿನಾಂಕ: 01-04-2025 ರಿಂದ 31-03-2026 ರವರೆಗೆ ಇರುತ್ತದೆ. ಅಗತ್ಯವಿದ್ದರೆ ಇವೇ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಅಥವಾ ಇನ್ನೂ ಹೆಚ್ಚಿನ ಷರತ್ತುಗಳ ಜೊತೆಗೆ ಮತ್ತೊಂದು ವರ್ಷದ ಅಥವಾ ಒಂದು ತ್ರೈಮಾಸಿಕದ ಅವಧಿಗೆ ವಾಹನ ಮಾಲೀಕರು ಮತ್ತು ಈ ಇಲಾಖೆಯ ಆಯುಕ್ತರ ಲಿಖಿತ ಇಚ್ಛೆಯ ಮೇರೆಗೆ ಮುಂದುವರಿಸಬಹುದಾಗಿದೆ. ಇದಕ್ಕೂ ಮೊದಲು ಸಹ ಕರಾರು ರದ್ದುಗೊಳಿಸುವ ಹಕ್ಕು ಆಯುಕ್ತರು/ಜಂಟಿ ಆಯುಕ್ತರವರದ್ದಾಗಿರುತ್ತದೆ. ಅಲ್ಲದೆ ಅವಧಿಗೆ ಮುನ್ನಾ ಮೇಲ್ಕಂಡ ಕರಾರನ್ನು ರದ್ದುಗೊಳಿಸುವ ಹಕ್ಕು ವಾಣಿಜ್ಯ ತೆರಿಗೆ ಆಯುಕ್ತರಿಗೆ / ಜಂಟಿ ಆಯುಕ್ತರಿಗೆ ಇರುತ್ತದೆ.

08 ವಾಹನವನ್ನು ಸರಕಾರಿ ಕೆಲಸಕ್ಕೆ ಉಪಯೋಗಿಸುವಾಗ "ಸರಕಾರಿ ಕೆಲಸದ ಮೇಲೆ" ಅಥವಾ "ಕರ್ನಾಟಕ ಸರ್ಕಾರದ ಸೇವೆಯಲ್ಲಿ" ಎಂಬ ಫಲಕವಿರಬೇಕು. ಪಾರ್ಕಿಂಗ್ ಶುಲ್ಕ ಇತ್ಯಾದಿ ವಾಹನ ಮಾಲೀಕರೇ ಭರಿಸತಕ್ಕದ್ದು.

09 ವಾಹನದ ಯಾವುದೇ ಕಾನೂನು ಉಲ್ಲಂಘನೆಗೆ ಸ್ವತ: ಮಾಲೀಕ/ಚಾಲಕರೇ/ ಜವಾಬ್ದಾರರಾಗಿರುತ್ತಾರೆ.

10 ವಾಹನವನ್ನು ಕಛೇರಿಯ ಕೆಲಸಕ್ಕೆ ಉಪಯೋಗಿಸಿದ ನಂತರ ಸಂಬಂಧಪಟ್ಟ ಅಧಿಕಾರಿಗಳಿಂದ ಕಾಲಕಾಲಕ್ಕೆ ಸರಿಯಾಗಿ ಉಪಯೋಗಿಸಿದ ವಿವರದೊಂದಿಗೆ ಟ್ರಿಪ್ ಶೀಟ್‌ನಲ್ಲಿ ಭರ್ತಿ ಮಾಡಿ ಸಹಿ ಮಾಡುವುದು.

11 ಈ ಇಲಾಖೆಗೆ ಹೊರ ಗುತ್ತಿಗೆ ಆಧಾರದ ಮೇಲೆ ವಾಹನವನ್ನು ಪಡೆದಿರುವಂತಹ ಅವಧಿಯಲ್ಲಿ ಬೇರೆ ಯಾವುದೇ ಇಲಾಖೆಯಲ್ಲಿ ಅಥವಾ ಖಾಸಗಿ ಸಂಸ್ಥೆಯಲ್ಲಿ ಅಥವಾ ಬೇರೆ ಇನ್ನಾವುದೇ ಕೆಲಸಗಳಿಗೆ ವಾಹನವನ್ನು ಉಪಯೋಗಿಸುವಂತಿಲ್ಲ, ಹಾಗೂ ವಾಹನವನ್ನು ಪೂರ್ಣವಾಗಿ "ವಾಣಿಜ್ಯ ತೆರಿಗೆ ಇಲಾಖಾ ಸೇವೆಗಾಗಿ" ಮೀಸಲಿಡತಕ್ಕದ್ದು.

12 ರಜಾ ದಿನಗಳಲ್ಲಿ ಕಚೇರಿ ಕರ್ತವ್ಯ ನಿರ್ವಹಿಸುವ ಸಂದರ್ಭ ಬಂದಲ್ಲಿ ಮಾಲೀಕ/ಚಾಲಕರು ಯಾವುದೇ ಕಾರಣ ನೀಡದೇ ಬೇಷರತ್ತಾಗಿ ಕೆಲಸ ನಿರ್ವಹಿಸತಕ್ಕದ್ದು. ಒಂದು ವೇಳೆ ರಜಾದಿನಗಳಲ್ಲಿ ಕೇಂದ್ರ ಕಛೇರಿ ಬಿಡುವ ಸಂದರ್ಭ ಬಂದಲ್ಲಿ ಜಂಟಿ ಆಯುಕ್ತರ ಪೂರ್ವಾನುಮತಿಯನ್ನು ಪಡೆಯತಕ್ಕದ್ದು.

13 ವಾಹನಗಳಿಗೆ ಹಂಚಿಕೆ ಮಾಡಲಾದ ಅಧಿಕಾರಿಗಳು ರಜೆ/ಅನ್ಯ ಸೇವೆ/ಇನ್ಯಾವುದೇ ಕಚೇರಿ ಕಾರ್ಯ ನಿಮಿತ್ತ ಕಚೇರಿಯಿಂದ ಹೊರಗೆ ತೆರಳಿದ ಸಂದರ್ಭದಲ್ಲಿ ಅವರಿಗೆ ಸಂಬಂಧಿಸಿದ ವಾಹನ ಚಾಲಕರು ಆ ದಿನ ಪೂರ್ವಾಹ್ನ 10–00ಗಂಟೆಗೆ ಕಡ್ಡಾಯವಾಗಿ ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು (ಕೇ.ಕ), ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರವರ ಕಛೇರಿ (ಆಡಳಿತ), ವಿ.ಸ&ಸೇ.ತೆ.ಕ–6, ಬೆಂಗಳೂರು, ಇವರ ಬಳಿ ವರದಿ ಮಾಡಿಕೊಂಡು ಕಚೇರಿ ಆವರಣದಲ್ಲಿಯೇ ವಾಹನದೊಂದಿಗೆ ಇರತಕ್ಕದ್ದು. ಇಲ್ಲದಿದ್ದ ಪಕ್ಷದಲ್ಲಿ ಗೈರು ಹಾಜರು ಎಂದು ಪರಿಗಣಿಸಿ ಆ ದಿನದ ಸಂಭಾವನೆಯನ್ನು ಕಡಿತಗೊಳಿಸಲಾಗುವುದು.

14 ಖಾಸಗಿ ವಾಹನ ಮಾಲೀಕರು/ಚಾಲಕರು/ಟ್ರಾವಲ್ ಏಜನ್ಸೀಸ್/ಸಂಸ್ಥೆಯವರ ಮಾಸಿಕ ಬಾಡಿಗೆಗೆ ಸಂಬಂಧಿಸಿದಂತೆ ಈ ಕಚೇರಿಗೆ ಬಿಲ್ಲುಗಳನ್ನು ಸಲ್ಲಿಸುವಾಗ ಮಾಹೆಯಲ್ಲಿ ಕರ್ತವ್ಯಕ್ಕೆ ಹಾಜರಾದ ದಿನಗಳು, ಒಟ್ಟು ಓಡಿಸಿದ ಕಿಲೋಮೀಟರ್ ಮತ್ತು ಸಮಯಕ್ಕೆ ಸಂಬಂಧಿಸಿದಂತೆ ದೃಢೀಕೃತ ಪ್ರಮಾಣ ಪತ್ರವನ್ನು ಅಧಿಕಾರಿಗಳಿಂದ ಪಡೆದು ಬಿಲ್ಲಿನ ಜೊತೆ ಸಲ್ಲಿಸುವುದು.

15 ಮೇಲಿನ ಷರತ್ತು ಮತ್ತು ನಿಬಂಧನೆಗಳನ್ನು ಪಾಲಿಸದಿರುವುದು ಮತ್ತು ನಿರ್ಲಕ್ಷಿಸಿರುವುದು ಕಂಡುಬಂದಲ್ಲಿ ಯಾವುದೇ ಸೂಚನೆ ನೀಡದೆ ಹೊರಗುತ್ತಿಗೆ ಆಧಾರದ ಕರಾರನ್ನು ರದ್ದುಪಡಿಸಲಾಗುವುದು.

16 ವಾಹನ ಚಾಲಕರು ಒಂದು ವೇಳೆ ಕರಾರು ಒಪ್ಪಂದವನ್ನು ರದ್ದುಪಡಿಸಬೇಕಾದರೆ, ಒಂದು ತಿಂಗಳು ಮುಂಚಿತವಾಗಿ ಈ ಕಛೇರಿಗೆ ಲಿಖಿತ ಮೂಲಕ ತಿಳಿಸಬೇಕು. ತಪ್ಪಿದ್ದಲ್ಲಿ ಒಂದು ತಿಂಗಳ ವಾಹನದ ಬಾಡಿಗೆ ಮೊತ್ತವನ್ನು ನೀಡುವುದಿಲ್ಲ ಹಾಗೂ ಇದಕ್ಕೂ ಮೊದಲು ಸಹ ಕರಾರು ರದ್ದುಗೊಳಿಸುವ ಹಕ್ಕು ಆಯುಕ್ತರು/ಜಂಟಿ ಆಯುಕ್ತರವರದ್ದಾಗಿರುತ್ತದೆ

17 ಯಾವುದೇ ಸೂಚನೆ ನೀಡದೆ ಟೆಂಡರ್ ಅನ್ನು ತಿರಸ್ಕರಿಸುವ ಮತ್ತು ಪಡೆಯುವ ಹಕ್ಕು ವಾಣಿಜ್ಯ ತೆರಿಗೆ ಆಯುಕ್ತರಿಗೆ / ಜಂಟಿ ಆಯುಕ್ತರಿಗೆ ಇರುತ್ತದೆ.

18 ಮೇಲ್ಕಂಡ ಷರತ್ತುಗಳಲ್ಲದೆ ಕಛೇರಿ ಕರ್ತವ್ಯದ ಸುಗಮ ಕಾರ್ಯನಿರ್ವಹಣೆಗಾಗಿ ಇತರೆ ಯಾವುದೇ ಷರತುಗಳನ್ನು ವಿಧಿಸುವ ಅಧಿಕಾರವನ್ನು ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ–06, ಬೆಂಗಳೂರು ಇವರು ಹೊಂದಿರುತ್ತಾರೆ.

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು(ಆಡಳಿತ),
ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ–06,
ಬೆಂಗಳೂರು–560058.

ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು
ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ–6
ಬೆಂಗಳೂರು–560 058

<u>ಪ್ರತಿಗಳನ್ನು :–</u>

1. ಮಾನ್ಯ ವಾಣಿಜ್ಯ ತೆರಿಗೆಗಳ ಆಯುಕ್ತರು (ಕರ್ನಾಟಕ), ಬೆಂಗಳೂರು ಇವರಿಗೆ ಮಾಹಿತಿಗಾಗಿ ಗೌರವಪೂರ್ವಕವಾಗಿ ಸಲ್ಲಿಸಲಾಗಿದೆ
2. ಮಾನ್ಯ ವಾಣಿಜ್ಯ ತೆರಿಗೆ ಅಪರ ಆಯುಕ್ತರು(ಕೇಂ.ಕ)–2, ವಾಣಿಜ್ಯ ತೆರಿಗೆ ಕಾರ್ಯಾಲಯ, ಗಾಂಧೀನಗರ, ಬೆಂಗಳೂರು, ಇವರ ಮಾಹಿತಿಗಾಗಿ ಗೌರವಪೂರ್ವಕವಾಗಿ ಸಲ್ಲಿಸಲಾಗಿದೆ.
3. ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು(ಆ), ಡಿ.ಜಿ.ಎಸ್.ಟಿ.ಓ–01, 02, 03, 04 ಮತ್ತು 05 ಬೆಂಗಳೂರು ಸದರಿ ಪ್ರಕಟಣೆಯನ್ನು ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಲಾಗಿದೆ.
4. ಪ್ರಾದೇಶಿಕ ಸಾರಿಗೆ ಅಧಿಕಾರಿಗಳು (ಪಶ್ಚಿಮ), ರಾಜಾಜಿನಗರ, ಬೆಂಗಳೂರು ಇವರಿಗೆ ಮಾಹಿತಿಗಾಗಿ.
5. ಸಾರ್ವಜನಿಕ ಮಾಹಿತಿಗಾಗಿ ಸೂಚನಾ ಫಲಕಕ್ಕೆ.
6. ವಾಣಿಜ್ಯ ತೆರಿಗೆಗಳ ಉಪ ಆಯುಕ್ತರು, ಗಣಕ ಕೇಂದ್ರ, ಬೆಂಗಳೂರು ಇವರಿಗೆ ಸದರಿ ಪತ್ರವನ್ನು ಇಲಾಖಾ ಅಂತರ್ಜಾಲದಲ್ಲಿ ಪ್ರಕಟಿಸಲು ಕೋರಲಾಗಿದೆ.
7. ಕಛೇರಿಯ ಪ್ರತಿ.